# ಅಧ್ಯಾಯ 3

ಶ್ರೀ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಛಂದ :- ಸಿದ್ಧ ಸದ್ಗುರುನಾಥ ತಾವೈರಾಗ್ಯ ಬಾಲ್ಯದಿ ತೊಟ್ಟಿದ
ಬದ್ಧರಿಗೆ ಗುರುಶೋಧಪಂಥದ ಕಷ್ಟಗಳನೇ ತೋರಿದ ಮುಗ್ಧ
ವಿಗ್ರಹಕಿಂತ ಜ್ಞಾನಿಯ ಪೂಜೆಯೇ ಮಿಗಿಲೆನ್ನುತ ಬೋಧಿಸಿದ
ನಜ್ಞಾನಿ ಜನರಿಗೆ ಸಿದ್ಧಬಾಲನು ನಲಿಯುತ....

ಶ್ರೀ ಸದ್ಗುರು ಸಿದ್ಧನಾಥನೇ ನಿನಗೆ ಜಯವಾಗಲಿ, ನಿನ್ನ ಚಿಂತನವನ್ನು ಮಾಡುವುದರಿಂದ ಭಕ್ತರ ಸರ್ವ ವ್ಯಥೆಗಳನ್ನು ನಿವಾರಿಸಿ, ಅವರ ಚಿತ್ತಕ್ಕೆ ಆನಂದವನ್ನು ಕೊಟ್ಟು ನೀನು ಅವರನ್ನು ಭವದೊಳಗಿಂದ ತಾರಿಸುವಿ. ಹೇ ಸದ್ಗುರುವೇ, ನೀನು ಒಲಿದಿಯಾದರೆ ಸಂಸಾರಕ್ಕೆ ಯಾರು ಭಯಪಡುವರು ? ಯಾರು ನಿಷ್ಕಾಮವಾಗಿ ನಿನ್ನನ್ನು ಹೃದಯದೊಳಗೆ ಭಜಿಸುವರೋ ಅವರನ್ನು ನೀನು ಕಾಪಾಡುವಿ. ತೀರ್ಥಯಾತ್ರೆ ಮಾಡಿ ವ್ಯರ್ಥ ಸಂಕಟಪಡುವರು. ಅವರು ಗೃಹದಲ್ಲಿಯೇ ಇದ್ದು, ನಿನ್ನನ್ನು ಧ್ಯಾನಿಸಿದ್ದಾದರೆ, ನೀನು ಹೃದಯದಲ್ಲಿ ಪ್ರಕಟನಾಗಿ ಅವರಿಗೆ ನಿಜಪದವನ್ನು ಕೊಡುವಿ. ಆ ನಿಜಪದ ಹೊಂದಿ ಚಿಂತೆ ತಪ್ಪಿತು. ಬುದ್ಧಿಯು ಬ್ರಹ್ಮಾನಂದದಲ್ಲಿ ಶಾಂತವಾಯಿತು. ಮುಕ್ತತೆಯು ತಾನೇ ಕೈಸೇರಿತು. ಇಂಥಾ ದಯಾಳುವಾದ ಸದ್ಗುರುರಾಯನೇ, ನಿನ್ನ ಚರಣದಲ್ಲಿ ಸಂಸಾರ ಭಯವಿಲ್ಲ. ಅಲ್ಲಿಯೇ ನನಗೆ ಸ್ಥಾನವನ್ನು ಪಾಲಿಸು. ಅದರಿಂದ ನಾನು ಸರ್ವದಾ ನಿರ್ಭಯನಾಗುವೆನು.

ಇರಲಿ ಕುಲಗುರುಗಳಾದ ವೀರಭದ್ರಸ್ವಾಮಿಯವರು ನಿತ್ಯ ವೇದಾಂತ ಶ್ರವಣ ಮಾಡಿಸುತ್ತಿರುವಾಗ, ತಾಯಿಯ ಅಂಕದಲ್ಲಿ ಕೂತು ಸಿದ್ದನು ಬಹು ಆದರದಿಂದ ಶ್ರವಣ ಮಾಡುವನು. ಒಂದಾನೊಂದು ದಿನ ಶ್ರವಣ ಕಾಲದಲ್ಲಿ ವೈರಾಗ್ಯ ಬೋಧಿಸುವ ಉದ್ಧಿಶ್ಯ. ಸ್ವಾಮಿಯವರು ಅಂದದ್ದೇನೆಂದರೆ- "ಒಂದು ಕಾಲದಲ್ಲಿ ಪೃಥ್ವಿಯು ಸಾಗರದಲ್ಲಿ ಕರಗಿ ಹೋಗುವದು, ಮೇರು ಪರ್ವತವಾದರೂ ಬಿದ್ದು ಹೋಗುವುದು. ಪಂಚಭೂತಗಳು ನಾಶಹೊಂದುವವು. ಸ್ವರ್ಗಾದಿ ಸಮಸ್ತ ಲೋಕಗಳು ಸಹ ಪ್ರಳಯಾಗ್ನಿಯಲ್ಲಿ ಸುಟ್ಟು ಹೋಗುವವು. ಆ ಸಮಯದಲ್ಲಿ, ದೇಹವೇ ತಾನೆಂದೂ ಇಲ್ಲಿ ಸುಖವನ್ನು ಭೋಗಿಸುವೆನೆಂದೂ ಅನ್ನುವಂಥಾ ಭ್ರಾಂತ ಮನುಷ್ಯನ ಸ್ಥಿತಿ ಏನೆಂದು ಹೇಳಲಿ ". ಇದನ್ನು ಕೇಳಿದ ಸಿದ್ಧನು, ಗುರುಗಳನ್ನು ಕುರಿತು, "ಸ್ವಾಮಿಗಳೇ ಆಕಾಶವು ಹ್ಯಾಗೆ ಪ್ರಳಯ ಹೊಂದುವದು ?" ಎಂದು ಅಂದದ್ದಕ್ಕೆ ಗುರುಗಳು, "ಎಲೋ ತಮ್ಮಾ, ಆತ್ಮಾನುಭವಿಯಾದ ಯೋಗ್ಯ ಗುರುವಿಗೆ ಈ ಪ್ರಶ್ನೆಯನ್ನು ಕೇಳಿತಕ್ಕದ್ದು" ಅಂದರು. ಕುಲಗುರುಗಳ ಈ

ವಚನವನ್ನು ಕೇಳಿ ಸಿದ್ಧನು ತಾನು ಬ್ರಹ್ಮವೇತ್ತನಾದ ಗುರುವನ್ನು ಹುಡಕಬೇಕು ಎಂದು ಮನಸ್ಸಿನಲ್ಲಿ ನಿರ್ಧರಿಸಿದನು. ಮರುದಿನ ಪ್ರಾತಃಕಾಲದಲ್ಲಿ ಸಿದ್ಧಬಾಲಕನು ಮನೆಯಲ್ಲಿ ಯಾರಿಗೂ ಹೇಳದೆ ರಸ್ತೆ ಹಿಡಿದು ಹೋಗುತ್ತಿರುವಾಗ,

ಅವನ ಮಿತ್ರರಾದ ಸೋಮ ಮತ್ತು ಭೀಮ ಎಂಬವರಿಬ್ಬರು ದಾರಿಯಲ್ಲಿ ಭೆಟ್ಟಿಯಾದರು. ಅವರು ಸಿದ್ಧನನ್ನು ಕುರಿತು- "ಅಪ್ಪಾ ಎತ್ತಲಾಗೆ ಹೊರಟಿರುವಿ?" ಎಂದು ಕೇಳಲು, ಸಿದ್ದನು, "ಸರ್ವ ಪ್ರಪಂಚ ನಾಶವಾಗುವದು. ಹೀಗಿರುವಾಗ್ಗೆ ಇಲ್ಲಿದ್ದು ಏನು ಪ್ರಯೋಜನ? ದೇಹವಿರುತ್ತಾ ಪ್ರಾಣಿಯು ತನ್ನ ನಿಜಾತ್ಮ ಸಂಪಾದನೆಗೊಸ್ಕರ ಯತ್ನ ಮಾಡತಕ್ಕದ್ದು. ಆ ಸಲುವಾಗಿ ಗುರುಬೋಧವು ಬೇಕಾಗಿರುತ್ತದೆ. ಇಲ್ಲವಾದರೆ ಸರ್ವ ಯತ್ನಗಳು ವ್ಯರ್ಥ. ಆದ್ದರಿಂದ ನಾನು ಈಗ ಗುರುಶೋಧನೆಗೆ ಹೊರಟಿರುವೆನು", ಎಂದು ಉತ್ತರ ಕೊಟ್ಟನು. ಅದಕ್ಕವರು, "ಇಷ್ಟು ಚಿಕ್ಕವಯಸ್ಸಿನಲ್ಯಾಕೆ ? ಈ ಕೆಲಸವು ವೃದ್ದಾಪ್ಯ ಕಾಲದಲ್ಲಿ ಶೋಭಿಸುವದು" ಎಂದು ಅಂದದ್ದು ಕೇಳಿ, “ಮುದಿ ವಯಸ್ಸಿನಲ್ಲಿ ಇದು

ಸಾಧ್ಯವಾಗುವುದಿಲ್ಲ. ಯಾಕೆಂದರೆ,ಯೌವನ ಕಾಲದಲ್ಲಿ ಕಾಮ ಕ್ರೋಧಾದಿಗಳು ವಿವೇಕ ಕಣ್ಣುಗಳನ್ನು ಕುರುಡು ಮಾಡುವವು. ಅದರಿಂದ ಸ್ವರೂಪ ಬೋಧವು ಮರೆತು, ಅಗಾಧವಾದ ದುಃಖ ಭೋಗಿಸಬೇಕಾಗುವದು. ಯೌವ್ವನದಲ್ಲಿ ಭೋಗಿಸಿದ ಭೋಗಗಳು ಸ್ಮೃತಿಯು ವೃದ್ಧಾಪ್ಯ ಕಾಲದಲ್ಲಿ ಉಳಿದು ಜೀವನು ರಾತ್ರಿ ಹಗಲು ಚಿಂತೆಯೊಳಗೆ ಮಗ್ನನಾಗಿದ್ದು, ಆತನಿಗೆ ಸದ್ವಿಚಾರವು ಸರ್ವಥಾ ಹುಟ್ಟುವದಿಲ್ಲ. ಆಗ ಚಿತ್ತವು ಬಹಳ ಚಂಚಲವಾಗುವದು, ಇದಲ್ಲದೆ ಮರಣ ಭೀತಿಯು ನಿರಂತರ ಕಾಡುವುದು. ಈ ಪ್ರಕಾರ ಜೀವನು ತಳಮಳಿಸುತ್ತಿದ್ದು, ಆತನಿಗೆ ವೇದಾಂತ ಶ್ರವಣವಾದರೂ ನಿರರ್ಥಕವಾಗುವದು. ಆದ್ದರಿಂದ ಸ್ವಚ್ಛಂದವಿರುವ ಬಾಲ್ಯಸ್ಥಿತಿಯಲ್ಲಿ ಆತ್ಮಜ್ಞಾನಿಯಾದ ಗುರುವನ್ನು ಶೋಧಿಸತಕ್ಕದ್ದು. ಅಂಥ ಗುರುವಿನ ಉಪದೇಶವನ್ನು ಕೈಕೊಂಡು ಜ್ಞಾನ ಸಂಪಾದನೆ ಮಾಡುವದರಲ್ಲಿ ವರ್ತಿಸತಕ್ಕದ್ದು", ಎಂದು ಸಿದ್ಧನು ನುಡಿದನು. ಬಾಲಕನಾದ ಸಿದ್ಧಮುನಿಯು ಹೀಗಂದ ವಚನವನ್ನು ಕೇಳಿದ ಕೂಡಲೆ,

ಅವರಿಬ್ಬರ ಚಿತ್ತದೊಳಗೆ ವಿಚಾರ ಪ್ರಕಾಶಿಸಿ, ಸಿದ್ಧನನ್ನು ಕುರಿತು, "ಹಾಗಾದರ ಅಪ್ಪಾ, ನಿನ್ನ ಸಂಗಡ ನಾವು ಬರುವೆವು. ಸದ್ಗುರುವಿಗೆ ಶರಣು ಹೊಕ್ಕು ಆತ್ಮಜ್ಞಾನವನ್ನು ಪ್ರಾಪ್ತಿಮಾಡಿಕೊಂಡು ಮರಳಿ ಮನೆಗೆ ಬಂದು ನಮ್ಮ ನಮ್ಮ ಕಾರ್ಯಗಳಲ್ಲಿ ಉದ್ಯುಕ್ತರಾಗುವೆವು", ಎಂದು ಅಂದದ್ದಕ್ಕೆ ಸಿದ್ಧನು ಒಡಂಬಟ್ಟನು. ಮೂವರೂ ದಾರಿ ನಡೆಯುತ್ತ ಒಂದು ಹರದಾರಿ ಮೇಲೆ ಒಂದು ಗ್ರಾಮಕ್ಕೆ ಮುಟ್ಟಿದರು. ಆ ಸಮಯದಲ್ಲಿ ಸೋಮಭಿಮರು ಹಸಿವೆಯಿಂದ ಬಹಳ ತಾಪ ಹೊಂದಿದವರಾಗಿ ಸಿದ್ಧನನ್ನು ಕುರಿತು, "ಮಿತ್ರನೆ, ನಮಗೆ ಬಹಳ ಹಸಿವೆಯಾಗಿದೆ. ಇಲ್ಲಿ ನಮಗೆ ಯಾರು ಅನ್ನವನ್ನು ಕೊಟ್ಟಾರು ?" ಅಂದದ್ದನ್ನು ಕೇಳಿ, ಸಿದ್ಧನು, "ದೇಹದ ಚಿಂತೆಯನ್ನು ಮಾಡಬೇಡಿರಿ. ಹೃದಯದಲ್ಲಿ ಅಖಂಡವಾಗಿ ಪರಮಾತ್ಮನ ಧ್ಯಾನವನ್ನು ಮಾಡಿ, ಆ ಸುಖಾಮೃತದ ಪಾನವನ್ನು ಮಾಡಿದ್ದಾದರೆ ಜೀವಕ್ಕೆ ಸಮಾಧಾನವಾಗುವದು. ಇಂಥಾ ತೃಪ್ತಿಯು ಅನ್ನದಿಂದಾಗದು. ಇದು ತಿಳಿಯದವರು ಅನ್ನ ಬೇಡುವರು. ದೇಹವನ್ನು ಪರಮಾತ್ಮನು

ಕೊಟ್ಟಿರುವವನಾದ್ದರಿಂದ ಆತನೇ ಅದನ್ನು ರಕ್ಷಿಸಬೇಕು"ಎಂದು ಉತ್ತರ ಕೊಟ್ಟನು. ಇದನ್ನು ಕೇಳಿ ಅವರಿಬ್ಬರೆನ್ನುತ್ತಾರೆ- "ನಿನ್ನ ಶಾಸ್ತ್ರ ಉತ್ಪತ್ತಿಯನ್ನುನಾವು ಬಲ್ಲೆವು. ಹಸಿವೆಯಿಂದ ಪ್ರಾಣಿಗಳು ತಳಮಳಿಸುತ್ತಿರುವಾಗ, ಅನ್ನ ಹೊರ್ತು ಮತ್ಯಾರಿಂದಲೂ ನಡೆಯಲಾರದು. ಇದೇ ಅರ್ಥದಲ್ಲಿ ಪರಾಶರ ಸ್ಮೃತಿಯೂ ಪ್ರಾಣವು ಅನ್ನಾಧಾರದಿಂದಿರುವದು, ಎಂದು ಅನ್ನುತ್ತದೆ. ಪ್ರಾಣ ತೃಪ್ತಿಯಿಂದ ಮನಸ್ಸಿಗೆ ಶಾಂತಿ, ಅದರಿಂದ ಅದು ಧ್ಯಾನಕ್ಕೆ ಬರುವುದು" ಎಂದು ಹೇಳುವುದನ್ನು ಕೇಳಿ, ಸಿದ್ಧನು "ಇಷ್ಟು ವಿಚಾರತಿಳಿದಿರುವಾಗ, ಅನ್ನಕ್ಕೋಸ್ಕರ ಯಾಕೆ ದುಃಖಿಸಬೇಕು. ಸರ್ವ ಜಗತ್ತನ್ನು ಪೋಷಿಸುವಂಥಾ ಸರ್ವೆಶ್ವರನಿರುತ್ತಾನೆ. ಅವನೇ ನಿಮಗಾದರೂ ಅನ್ನಪೂರೈಸುವನು, ಕ್ಷುಧೆಯು ನಿಮಗೆ ಸ್ವಾಭಾವಿಕವಲ್ಲ. ಮನಸ್ಸು ಹೃದಯ ಕಮಲದ ದಳಗಳ ಪೈಕಿಕ್ಷುಧೆಯ ದಳಕ್ಕೆ ಹೋದಾಗ್ಗೆ ಹಸಿವೆಯಾಗುವದು. ಆಗ್ಗೆ ಆ ಮನಸ್ಸನ್ನು ಇತರ ದಳಕ್ಕೆ ಹಚ್ಚಬೇಕು. ಅದರಿಂದ ಹಸಿವು ಜಯಿಸಲ್ಪಡುವದು. ಇದು ಧ್ಯಾನದಿಂದ ಆಗುವದು, ಇತರ ಉಪಾಯ

ನಡೆಯಲಾರದು. ಯಾಕೆಂದರೆ ಧ್ಯಾನದಲ್ಲಿ ಪ್ರಾಣವು ಸ್ತಭ್ಧವಾಗುತ್ತದೆ. ಇದರಿಂದ ಜಠರಾಗ್ನಿ ಉದ್ವಿಗ್ನವಾಗದು. ಆಗ ಕ್ಷುಧೆಯು ಶಾಂತವಾಗಿ ಜೀವಕ್ಕೆ ಬಾಧೆಯಾಗುವದಿಲ್ಲ", ಎಂದು ಅಂದನು. ಈ ಪ್ರಕಾರ ಸಿದ್ಧನ ವಚನಾಮೃತವನ್ನು ಕೇಳಿ, ಅವರು ಶಾಂತಚಿತ್ತರಾದರು. ಮಾರ್ಗಶ್ರವಣ ಮಾಡಿ, ಮುಂದೆ ಒಂದು ಗ್ರಾಮಕ್ಕೆ ಪ್ರಾಪ್ತಗಾಗಿ, ಮೂವರೂ ಒಂದು ಬಸವನ ಗುಡಿಯಲ್ಲಿ ಪ್ರವೇಶಿಸಿದರು. ಮಾರ್ಗಾಯಾಸದಿಂದ ಖಿನ್ನರಾಗಿ ಭೀಮಸೋಮರಿಬ್ಬರೂ ಆ ಗುಡಿಯ ಒಂದು ಮೂಲೆಯಲ್ಲಿ ಮಲಗಿಕೊಂಡು ನಿದ್ದೆ ಹೋಗುತ್ತಿದ್ದರು. ಆ ಸಮಯದಲ್ಲಿ ಸಿದ್ದನು ಸುಂದರವಾದ ಬಸವಣ್ಣನ ಮೂರ್ತಿಯನ್ನು ಕಂಡು, ಅದರ ಬೆನ್ನಮೇಲೆ ಹತ್ತಿ ಕೂತುಕೊಂಡನು.ಏಳು ವರ್ಷದ ಸಿದ್ಧನ ಮನೋಹರವಾದ ಮೂರ್ತಿಯು ಬಸವಣ್ಣನ ಮೇಲೆ ಶೋಭಿಸುತ್ತಿತ್ತು. ಅದೇ ಸಮಯದಲ್ಲಿ ಪೂಜಾರಿಯು ಬಂದು, ಬಸವಣ್ಣನ ಮೇಲೆ ನಗೆಮುಖದಿಂದ ಶಾಂತವಾಗಿ ಕೂತಿರುವ ಸಿದ್ಧನನ್ನು ಕಂಡು ಕ್ರೋಧಿಷ್ಠನಾಗಿ " ಎಲೇ ಮಗನೇ, ನೀನೆಲ್ಲಿಯವ? ಈಗಿಂದೀಗಲೇ ಕೆಳಗಿಳಿ. ನಿನ್ನ ಭಯಭಕ್ತಿಯನ್ನು

ಎಲ್ಲಿಟ್ಟಿರುವೆ ? " ಎಂದು ಕೇಳಲು ಸಿದ್ದನು,

"ಪರಮಾತ್ಮನಲ್ಲಿಟ್ಟಿರುವೆನು. ಆದರೆ ನೀನು ಕಲ್ಲಿನಲ್ಲಿಟ್ಟಿರುವೆ"

ಎಂದು ಹೇಳಿದ್ದನ್ನು ಕೇಳಿ, ಅವನ ಬುದ್ಧಿಯು ವಿಚಾರಕ್ಕೆ ಬಿತ್ತು.

ಸಿದ್ಧನು ಅವನನ್ನು ನೋಡಿ ನಗುತ್ತಿರುವಾಗ, ಆ ಪೂಜಾರಿಯು,

"ಎಲೇ ನಿನಗೆ ಪ್ರಾಯಶ್ಚಿತ್ತ ಮಾಡುವೆನು" ಎಂದು ನುಡಿದು

ಗ್ರಾಮದೊಳಗೆ ಹೋದನು. ಕೆಲವು ಹೊತ್ತಿನ ಮೇಲೆ ಕೆಲವು

ಗ್ರಾಮಸ್ಥರನ್ನು ಕೂಡಿಕೊಂಡು ಗುಡಿಗೆ ಬಂದು, ಬಸವಣ್ಣ

ಮೇಲೆ ಕುತ್ತಿರುವ ಸಿದ್ಧಬಾಲಕನ ಮೂರ್ತಿಯನ್ನು ಅವರಿಗೆ

ತೋರಿಸಿದನು. ಅವರು ಸಿದ್ದನನ್ನು ನೋಡಿ, ಸಿಟ್ಟಿಗೆದ್ದು,

"ಎಲೋ ನಿನಗೆ ಹೊಡೆದು ಕೆಳಗೆ ಬಿಳಿಸುವೆವು" ಎಂದು

ಸಮೀಪಕ್ಕೆ ಬಂದರು. ಸಿದ್ಧನಾದರೋ ನಿರ್ಭಯನಾಗಿ

ಹಾಸ್ಯವದನದಿಂದ ಅವರ ಕಡೆಗೆ ನೋಡುತ್ತಿದ್ದನು.

ಆಗ್ಗೆಅವರೊಳಗೊಬ್ಬನು ಸಿದ್ಧನಿಗೆ ಮುಷ್ಠಿ ಪ್ರಹಾರ

ಮಾಡಬೇಕೆಂದು ಕ್ರೋಧದಿಂದ ಕೈ ಎತ್ತುವಾಗ, ಕೈಗೆ

ಗೋಡೆಯೊಳಗಿನ ಒಂದು ಮೊಳೆಯು ತಗುಲಿ ರಕ್ತ

ಸೊರಹತ್ತಿತು. ಇದನ್ನು ಕಂಡು ಇತರರು ಹಿಂಜರಿದು

ಕೇಳುತ್ತಾರೆ, “ಎಲೇ ಉನ್ಮತ್ತ ಹುಡುಗನೇ, ದೇವರ ಮೇಲೆ ಯಾತಕ್ಕೆ ಕೂತಿರುವಿ ?" ಅವರನ್ನು ನೋಡಿ ಹಾಸ್ಯಮುಖದಿಂದ ಸಿದ್ಧನು, "ಕೂತವನು ದೊಡ್ಡವನೊ ಕೂಡ್ರಿಸಿಕೊಂಡವನು ದೊಡ್ಡವನೋ, ನೀವೇ ಹೇಳಿರಿ. ಈ ವಿಗ್ರಹಕ್ಕೆ ಬಹು ಕಾಲದಿಂದ ಆಭಕ್ತ ಜನರು ಭಜಿಸುತ್ತ ಇದ್ದುದರಿಂದ ಇದರ ದೈವಿಕ ಸತ್ವ ಹೋಗಿ ಶಿಲಾಮಾತ್ರ ಉಳಿದಿರುತ್ತದೆಂದು ಇದರಲ್ಲಿ ಪ್ರಾಣಪ್ರತಿಷ್ಠೆ ಮಾಡುವದಕ್ಕೆ ಪ್ರವರ್ತಿಸುವೆನು," ಎಂದು ಎನ್ನುವ ಜ್ಞಾನಯುಕ್ತ ಹೃದಯದೊಳಗಿಂದ ಹೊರಟ ಅಮೃತಮಯ ವಚನಗಳನ್ನು ಕೇಳಿ, ಅವರಲ್ಲರೂ ಚಕಿತರಾಗಿ ಒಬ್ಬರಿಗೊಬ್ಬರು ಅನ್ನುತ್ತಾರೆ, “ಈ ಭಾಷಣವು ಅಲ್ಪವಲ್ಲ. ಇದರಲ್ಲಿ ಜ್ಞಾನ ಪ್ರತಾಪವು ಪ್ರಕಾಶಿಸುತ್ತದೆ. ಬಾಲರೂಪನಾಗಿ ಕಾಣಿಸುತ್ತಿದ್ದರೂ ಈತನು ಮಹಾಪುರುಷನಿರುವನು. " ಈ ಪ್ರಕಾರ ಅಂದು ಅವರೆಲ್ಲರು ಭಕ್ತಿಯಿಂದ ಸಿದ್ಧನ ಚರಣಗಳನ್ನು ಹಿಡಿಯುವಂಥವರಾದರು. ಆಗ ಅವರನ್ನು ಕುರಿತು ಸಿದ್ಧನು ಅಂದದ್ದೇನೆಂದರೆ, “ಭಕ್ತರೆ- ನನ್ನ ವಚನವನ್ನು ಕೇಳಿರಿ. ಮಹಾತ್ಮನ ಪೂಜೆಯೇ

ಶ್ರೇಷ್ಠವಾದದ್ದು. ಮೂರ್ತಿ ಪೂಜೆಯು ಅದಕ್ಕೂ ಕನಿಷ್ಟವು. ಯಾಕೆಂದರೆ ಮಹಾತ್ಮರ ರೂಪಿನಿಂದ ಪರಮಾತ್ಮನು ಪ್ರತ್ಯಕ್ಷನಿರುವನು ಎಂದು ಶೃತಿ ಸ್ಮೃತಿ ಗಳು ಸ್ಪಷ್ಟವಾಗಿ ಹೇಳುತ್ತವೆ. ಹ್ಯಾಗೆ ಗರ್ಭಗತ ಪ್ರಾಣಿಗೆ ತಾಯಿಮುಖದಲ್ಲಿ ಹಾಕಿದ ಅನ್ನದಿಂದಲೇ ತೃಪ್ತಿಯಾಗುವದೋ ಹಾಗೆ ಮಹಾತ್ಮರಿಗೆ ಪೂಜಿಸುವುದರಿಂದ ಪರಮಾತ್ಮನು ಪ್ರೀತನಾಗುವನು." ಈ ಮಹದ್ಭಾಷಣವನ್ನು ಕೇಳಿದ ಕೂಡಲೇ ಸಕಲ ಜನರು ಆಶ್ಚರ್ಯಚಕಿತರಾಗಿ, ಈ ಮಹಾತ್ಮನನ್ನು ಪೂಜಿಸುವೇವು, ಎಂದು ಅಂದುಕೊಂಡು, ಪೂಜಾಸಾಮಗ್ರಿ ತರಲಿಕ್ಕೆ ಗೃಹಗಳಿಗೆ ಹೋದರು. ಈ ವರ್ತಮಾನವನ್ನು ಗ್ರಾಮದ ಇತರ ಜನರೂ ಕೇಳಿಕೊಂಡು ಸರ್ವರು ಪೂಜಾ ವ ನೈವೇದ್ಯ ಪದಾರ್ಥಗಳನ್ನು ತೆಗೆದುಕೊಂಡು ಅತ್ಯಾತುರದಿಂದ ಬಸವಣ್ಣನ ಮೇಲೆ ಕೂತಿರುವ ಸಿದ್ಧನ ಬಳಿಗೆ ಬಂದರು. ಪುರುಷರೂ, ಸ್ತ್ರೀಯರೂ, ಬಾಲಕರೂ ಹೃದಯದಲ್ಲಿ ಅತ್ಯಂತ ಆಹ್ಲಾದಯುಕ್ತರಾಗಿ ನಂದಿಯ ಮೇಲೆ ಆರೂಢನಾಗಿರುವ ಸುಂದರವಾದ ಮೂರ್ತಿಯನ್ನು ಕಂಡು

ಬಹಳ ಹರ್ಷಪಟ್ಟರು. ಸಿದ್ದನನ್ನು ಪೂಜಿಸಿ ನೈವೇದ್ಯದಿಂದ ತುಂಬಿದ ಪಾತ್ರೆಗಳನ್ನು ಆತನ ಮುಂದಿಟ್ಟು ಸೇವಿಸಬೇಕೆಂದು ಪ್ರಾರ್ಥಿಸುತ್ತಿರುವರು. ಅಷ್ಟರಲ್ಲಿ ನಿದ್ದೆ ಹೋಗುತ್ತಿದ್ದ ಸೋಮಭೀಮರಿಬ್ಬರೂ ಎಚ್ಚತ್ತು, ಸಿದ್ಧನ ಬಳಿಗೆ ಬಂದು ಮಧುರವಾದ ನೈವೇದ್ಯ ಪದಾರ್ಥಗಳನ್ನು ನೋಡಿ, ತವಕದಿಂದ ಅವನ್ನು ಹಿಡಿಯುತ್ತಿರುವಾಗ, ಅವರಿಗೆ ಸಿದ್ಧನು, "ನೋಡಿರಿ, ಈಶ್ವರನು ನಮ್ಮ ದೆಸೆಯಿಂದ ಅನ್ನವನ್ನು ಇಲ್ಲಿಗೇ ಕಳುಹಿಸಿಕೊಟ್ಟನು. ಈಗ ಈಶ್ವರ ನಾಮಸ್ಮರಣೆ ಮಾಡುತ್ತಾ ನಿಮ್ಮ ಕ್ಷುಧೆಯ ಶಾಂತಿಮಾಡಿಕೊಳ್ಳಿರಿ," ಎಂದು ನುಡಿದನು. ಕೂಡಲೇ ಅವರು ಭೋಜನವನ್ನು ಆರಂಭಿಸಿದರು. ಸಿದ್ದನು ಸ್ವಲ್ಪ ಅನ್ನವನ್ನು ಸೇವಿಸಿ, ಈ ಜನರ ಸಂಗತಿಯು ಈಗ ನಮಗೆ ಒಳ್ಳೇದಲ್ಲ, ಎಂದು ಅಂದುಕೊಂಡು, ತನ್ನ ಮಿತ್ರರಿಗೆ ನೇತ್ರ ಸಂಕೇತ ಮಾಡಿ, ಜನರ ದೃಷ್ಟಿ ತಪ್ಪಿಸಿ, ಸಿದ್ಧನು ಅಲ್ಲಿಂದ ನಡೆದನು. ಮೂವರು ಮುಂದೆ ಹೋಗುತ್ತಿರುವಾಗ ಇರುಳಾಯಿತು. ಆಗ ಸೋಮನು ಸಿದ್ದನನ್ನು ಕುರಿತು, "ಗೆಳೆಯನೇ, ನಮ್ಮನ್ನು ಇನ್ನೆಲ್ಲಿ ಕರಕೊಂಡು ಹೋಗುವಿ.

ನಾವು ಈ ಅಡವಿಯೊಳಗೆ ದಾರಿಯು ಕಾಣಿಸುವದಿಲ್ಲ" ಎಂದು ಅನ್ನುತ್ತಿರುವಾಗ, ಭೀಮನು ಅವನಿಗೆ ಸಮಾಧಾನಪಡಿಸಿ, "ಸೋಮನೇ ಭಯವನ್ನು ಬಿಡು. ಈಶ್ವರನು ಸದಾ ಸಮೀಪ ಇರುವುನು. ಆತನೇ ನಮ್ಮನ್ನು ರಕ್ಷಿಸುವನು. ಆತನೇ ಈ ಕಾಲದಲ್ಲಿ ನಮ್ಮ ಸ್ಥಿರವಾದ ಸಖನು. ಆತನ ಮೇಲೆ ಭಾರವನ್ನಿಟ್ಟು ನಾವು ಧೈರ್ಯವಿಡಿದು ಮಾರ್ಗ ಕ್ರಮಿಸುವಾ", ಎಂದು ನುಡಿದದ್ದನ್ನು ಕೇಳಿ ಸೋಮನು ಸ್ವಸ್ಥನಾಗಿ ಹೆದರಿ ಹೆದರಿ ಮುಂದಕ್ಕೆ ನಡೆಯುತ್ತಿದ್ದನು. ಆಗ ಸೋಮನ ಕಾಲೊಳಗೆ ಒಂದು ಮುಳ್ಳು ಮುರಿಯಿತು. ನೋವು ತಾಳಲಾರದೆ ಅವನು ಅಲ್ಲೇ ಕೂತು ಅಳುತ್ತಾ, "ನಾನು ಬಂದದ್ದೇ ತಪ್ಪಾಯಿತು. ಈಗ ಏನು ಮಾಡಲಿ. ನಾನು ಇದರೊಳಗಿಂದ ಬದುಕಿದರೆ ಇನ್ನು ಮೇಲೆ ಇಂಥವರ ಸಂಗತಿ ಮಾಡಲಿಕ್ಕಿಲ್ಲ" ಎಂದು ಅನ್ನಲಿಕ್ಕೆ ಆರಂಭಿಸಿದನು. ಆಗ ಸಿದ್ದನೂ ಭೀಮನು ಅವನ ಕೈಹಿಡಿದು, ಅರಣ್ಯದೊಳಗಿಂದ ಹೋಗುತ್ತಿರುವಾಗ, ಅಡವಿ ಮೃಗಗಳ ಭಯಂಕರ ಗರ್ಜನೆಯ ಸಮೀಪದಲ್ಲಿಯೇ ಕೇಳಿಬಂತು. ಆಗ ಭೀಮನು

ಭಯಭೀತನಾಗಿ, 'ಸಿದ್ಧನೇ, ನನಗೆ ಬಹಳ ಭಯವಾಗುತ್ತದೆ. ಬೇಗನೇ ಗ್ರಾಮವನ್ನು ಸೇರೋಣ. ನನ್ನಿಂದ ಇಂಥಾ ದಾರಿಯಿಂದ ನಡೆಯಲಾಗದು",ಎಂದನ್ನುವದನ್ನು ಕೇಳಿ, ಸಿದ್ಧನು, "ಗುರುಶೋಧ ಪಂಥವು ಅತಿ ದಾರುಣವಾದದ್ದು. ದೇಹಾಭಿಮಾನವಿಡಿದು ಇಲ್ಲಿ ನಡೆಯಲಾಗದು. ಮಹತ್ತಾದ ಜನ್ಮದುಃಖವನ್ನು ನೆನೆದರೆ ಈ ದೇಹದುಃಖವು ಅತ್ಯಲ್ಪವಾದದ್ದು, ಅಂಥಾ ಜನ್ನದುಃಖವು ಗುರುವಿನಿಂದ ಪಡೆಯುವ ಆತ್ಮಜ್ಞಾನದಿಂದ ತಪ್ಪುವುದು. ದೇಹ ದುಃಖಕ್ಕೆ ಉದಾಸೀನವಾದಾಗಲೇ ಗುರುದಾಸ್ಯಕ್ಕೆ ಅಧಿಕಾರ ಬರುವದು. ಗುರುದಾಸ್ಯದ ವಿನಹಾ ಕೃಪಾಪೂರ್ವಕ ಗುರೂಪದೇಶವು ಪ್ರಾಪ್ತವಾಗದು. ಕೃಪಾಯುಕ್ತ ಗುರೂಪದೇಶವು ಪ್ರಾಪ್ತವಾಯಿತೆಂದರೆ, ದೇಹ ಬುದ್ಧಿರೂಪವಾದ ಜನ್ಮಮರಣ ದುಃಖ ಫಲವುಳ್ಳ ಈ ಸಂಸಾರವು ನಾಶವಾಗುವದು. ಸದ್ಗುರುವೇ ತಾನು ಹೃದಯದಲ್ಲಿ ಕೂತಿದ್ದು ಮುಮುಕ್ಷುವಿಗೆ ಬಹಿರ್ದಲ್ಲಿ ಭಯವನ್ನು ತೋರಿಸುವನು. ಈ ಪ್ರಕಾರ ಒಳ್ಳೆಯ ರೀತಿಯಾಗಿ ಆತನ ಪರೀಕ್ಷೆ ತಕ್ಕೊಂಡು ಯೋಗ್ಯವಾಗಿದ್ದರೆ

ಕೃಪಾಮಾಡುವನು. ಅಲ್ಪ ದುಃಖಕ್ಕೆ ಭಯಪಟ್ಟು ಶಾಶ್ವತ ಸುಖದ ಮಾರ್ಗವನ್ನು ತ್ಯಜಿಸಿದರೆ, ಅಂಥಾ ಹೇಡಿಯ ಮೇಲೆ ಕಲ್ಪಾಂತಕ್ಕಾದರೂ ಸದ್ಗುರುವು ಕೃಪೆ ಮಾಡನು," ಎಂದು ನುಡಿದ ವಾಕ್ಯವನ್ನು ಕೇಳಿ, ಅವರಿಬ್ಬರೂ "ಸಿದ್ಧ ಮುನಿಯೇ, ನಿನ್ನ ಭಾಷಣವನ್ನು ಕೇಳಿ ನಿನ್ನನ್ನು ಅನುಸರಿಸಲಿಕ್ಕೆ ನಮ್ಮ ಪ್ರೀತಿಯಿದೆ. ಆದರೆ ಗುರುಪ್ರಾಪ್ತಿಯು ಸುಲಭವಾಗಿ ಮಾಡಿಕೊಡುವ ಸಾಧನ ಸಂಪತ್ತಿಯು ನಮ್ಮಲ್ಲಿ ಇಲ್ಲ.ನಿನ್ನಂಥ ಮಹಾಪುರುಷರಿಗೇನೇ ಈ ಮಾರ್ಗವು ಯೋಗ್ಯವಾದದ್ದು. ನಮ್ಮಂಥವರಿಗಲ್ಲ, ಈಗ ಮುಂದೆ ಹೋಗಲಿಕ್ಕೆ ಹೆದರುತ್ತೇವೆ. ಗ್ರಾಮಕ್ಕೆ ಹೋಗುವ ದಾರಿಯನ್ನು ತೋರಿಸು", ಎಂದು ಹೇಳಿದರು. ಆಗ ಸಿದ್ಧನು ಎಡದಿಕ್ಕಿಗೆ ಒಂದು ಜ್ಯೋತಿಯನ್ನು ತೋರಿಸಿದನು . ಅದನ್ನು ಕಂಡು ಆನಂದ ಚಿತ್ತದಿಂದ ಭೀಮಸೋಮರು ಸಿದ್ಧನ ಬೆನ್ನುಹತ್ತಿ ಆ ದೀಪ ಕಾಣಿಸುವ ಕಡೆಗೆ ಹೋದರು. ಆ ಗ್ರಾಮದಲ್ಲಿ ಪ್ರವೇಶಿಸಿ, ಒಂದು ಹಾಳು ಬಿದ್ದ ದೇವಾಲಯದೊಳಗೆ ಹೋಗಿ ಬಹಳ ದಣಿದವರಾಗಿ ಮೂವರೂ ಮಲಗಿಕೊಂಡರು. ದೇವಾಲಯವು ಬಹಳ

ಜೀರ್ಣಸ್ಥಿತಿಯಲ್ಲಿತ್ತು, ಮೇಲೆ ಮಳೆಯು ಅತಿಶಯವಾದ್ದರಿಂದ ಅದರದೊಂದು ಭಾಗದ ಗೋಡೆಯು ಬಿತ್ತು. ಇದನ್ನು ಕಂಡು ಗಾಬರಿಯಾಗಿ ಅವರಿಬ್ಬರು, "ನಮಗೆಂಥಾ ದುರ್ದಶೆ ಪ್ರಾಪ್ತವಾಯಿತು. ಸಿದ್ಧನ ಸಂಗ ಹಿಡಿದಿದ್ದಕ್ಕೆ ಹೀಗಾಯಿತು. ನಾವು ಸಾಯುತ್ತೇವೊ ಉಳಿಯುತ್ತೇವೋ ತಿಳಿಯದು". ಎಂದು ಅನ್ನುತ್ತಿರುವಾಗ, ಸಿದ್ಧನು ಕೇಳಿ, ಅವರಿಬ್ಬರನ್ನು ಕುರಿತು, "ನಾವು ಸದ್ಗುರುವನ್ನು ಹುಡುಕಲಿಕ್ಕೆ ಹೊರಟಿರುತ್ತೇವೆ. ಈಗ ದೇಹದ ಚಿಂತೆಯು ಎಲ್ಲಿಂದ ಬಂತು? ನೀವು ಗ್ರಾಮದೊಳಗೆ ಹೋಗಬೇಕೆಂತ ಇಚ್ಛೆಸಿದಿರಿ. ಆದರೆ ಗ್ರಾಮದೊಳಗೆಬಂದರೂ ದುಃಖ ಹಾಗೆಯೇ ಅದೆ. ಲೋಕದಲ್ಲಿ ಇಚ್ಛಿತ ಯಾವದೊಂದು ವಿಷಯ ಸಿಕ್ಕರೂ, ದುಃಖವು ಮತ್ತೂಉಳಿಯುವುದು. ಯಾಕೆಂದರೆ ಒಂದು ಇಚ್ಛಿತ ವಿಷಯ ಪ್ರಾಪ್ತವಾದ ಕೂಡಲೇ, ಮನಸ್ಸು ಅದನ್ನು ಬಿಟ್ಟು ಬೇರೊಂದನ್ನು ಇಚ್ಛಿಸುವದು. ಆದ್ದರಿಂದ ಜಾಣನಾದವನು ಹ್ಯಾಗಾದರೂ ಉಪಾಯದಿಂದ ಮನಸ್ಸನ್ನೇ ನಿಗ್ರಹಿಸಬೇಕು" ಎಂದು ನುಡಿದನು. ಇಷ್ಟರೊಳಗೆ ಮಳೆಯು ನಿಂತಿತು. ಆಗ ಭೀಮ, ಸೋಮ ಇಬ್ಬರಿಗೂ

ಹಸಿವೆಯಾಯಿತು. “ಈಗ ಸಿದ್ಧನು ಮಲಗಿಕೊಂಡಿರುವಾಗಲೇ ನಾವು ಭಿಕ್ಷೆಗೆ ಹೋಗೋಣ”, ಎಂದು ಅವರು ಒಬ್ಬರಿಗೊಬ್ಬರು ಅಂದುಕೊಂಡು, ಇಬ್ಬರೂ ಗ್ರಾಮದೊಳಗೆ ಹೋದರು. ಒಬ್ಬ ಗೃಹಸ್ಥನ ಮನೆಗೆ ಹೋಗಿ ನಿಂತಾಕ್ಷಣ ಆತನು ಒಳಗಿಂದ ಬಂದು ಇವರನ್ನು ನೋಡಿ, “ಇವರು ಕಳ್ಳರಿರುವರು. ಮೊನ್ನೆ ನಮ್ಮ ಉತ್ತಮವಾದ ಎಮ್ಮೆಯನ್ನು ಇವರೇ ನಿಶ್ಚಯವಾಗಿ ಕಳವು ಮಾಡಿದರು. ಈಗ ಪಾಳತಿ ನೋಡಲಿಕ್ಕೆ ಸಾಧುಗಳಂತೆ ಪುನಃ ಬಂದಿದ್ದಾರೆ" ಎಂದು ಅಂದದ್ದು ಕೇಳಿ, ಇಬ್ಬರೂ "ಒಡೆಯರೇ,ನಾವು ಕಳ್ಳರಲ್ಲ. ಈಗಲೇ ನಾವು ಈ ಗ್ರಾಮಕ್ಕೆ ಬಂದೆವು. ಸ್ವಾಮಿ, ನಮ್ಮ ಮೇಲೆ ಕೃಪೆ ಮಾಡಬೇಕು ", ಎಂದು ದಿನಭಾವದಿಂದ ನುಡಿದರು. ಆ ಗೃಹಸ್ಥನು ಅಧಿಕ ಸಿಟ್ಟಿಗೆದ್ದು, “ನಿಮಗೆ ಈಗಲೇ ಕಪಾಳ ಭಿಕ್ಷೆಯನ್ನು ಕೊಡುವೆನು, ನಿಲ್ಲಿರಿ, ನಿಲ್ಲಿರಿ" ಎಂದು ಅಂದದ್ದು ಕೇಳಿ, ಇಬ್ಬರೂ ಓಡಲಾರಂಭಿಸಿದರು. ದಾರಿಯಲ್ಲಿ ಗಸ್ತಿ ಸಿಪಾಯರು ಅವರನ್ನು ಹಿಡಿದು, “ನೀವು ಯಾರು ? ರಾತ್ರಿ ಹೊತ್ತಿನಲ್ಲಿ ಹೀಗೆ ಅಡ್ಡಾಡ ಬೇಡಿರಿ. ಆ ಹಾಳು ಗುಡಿಗೆ ಹೋಗಿ ರಾತ್ರಿ ಕಳೆದು, ನಾಳೆ

ಮುಂಜಾನೆ ಗ್ರಾಮ ಬಿಟ್ಟು ಹೋಗಿರಿ", ಎಂದು ಹೇಳಿ ಅವರನ್ನು ತಿರಿಗಿಸಿಬಿಟ್ಟರು. ಮನಸ್ಸಿನಲ್ಲಿ ಬಹು ದುಃಖಿತರಿಗೆ ಅದೇ ಗುಡಿಗೆ ಮರಳಿ ಬಂದು ನೋಡಿದರೆ, ಸಿದ್ಧನು ಆನಂದದಿಂದ ಕೂತಿರುವದನ್ನು ಕಂಡರು. ಇವರನ್ನು ಕಂಡು, ಆತನು, "ನೀವು ಈಶ್ವರನ ಮೇಲೆ ಭಾರ ಇಡದೆ, ಭಿಕ್ಷೆದಶೆಯಿಂದ ಗ್ರಾಮದೊಳಗೆ ಹೋದಿರಿ. ನಾನಾದರೋ ಶಿವಧ್ಯಾನ ತತ್ಪರನಾಗಿ ಇಲ್ಲೇ ಕೂತಿರುವಾಗ, ಅರ್ಚಕನು ಬಂದು ದೇವರಿಗೆ ನೈವೇದ್ಯ ತೋರಿಸಿ, ಅನ್ನದ ಪಾತ್ರೆಯನ್ನು ನನ್ನ ಮುಂದಿಟ್ಟನು. ಆದರೆ ನೀವು ಬಹಳ ಹಸಿದಿರುವಿರಿ; ಊರೊಳಗೆಭಿಕ್ಷೆ ಸಿಗದೆ ನೀವು ಮರಳಿ ಬರುವಿರೆಂದು ನಾನು ತಿಳಿದು, ನಿಮ್ಮ ಸಲುವಾಗಿ ಆ ಅನ್ನವನ್ನು ಇಟ್ಟಿರುತ್ತೇನೆ", ಎಂದು ಅಂದದ್ದು ಕೇಳಿ, ಅವರಿಬ್ಬರೂ "ತ್ರಾಹಿ, ತ್ರಾಹಿ, ದಯಾಳು ದೇವರನ್ನು ಮರತ ನಮ್ಮ ಜೀವತ್ವವು ವ್ಯರ್ಥ" ಎಂದಂದುಕೊಂಡರು. ಅನಂತರ ಮೂವರು ಕೂತು ಆನಂದದಿಂದ ಭೋಜನ ಮಾಡಿ,ಅಲ್ಲೇ ರಾತ್ರಿಯನ್ನು ಕಳದರು. ಮರುದಿನ ಮುಂಜಾನೆ ಎದ್ದು, ಭೀಮಸೋಮರಿಬ್ಬರೂ

ಸಿದ್ಧನನ್ನು ಕುರಿತು, "ಹೇ ಸಿದ್ಧನಾಥನೇ ನಾವು ಪಾಮರರಿದ್ದೇವೆ. ನಮಗೆ ಮನಸ್ಸಿನ ನಿರ್ಧಾರವು ನಿಲ್ಲದು. ದುರ್ಧರವಾದ ಗುರುಶೋಧದ ಮಾರ್ಗದಲ್ಲಿ ನಾವು ನಡಯಲಾರೆವು. ನಮಗೆ ಹೊತ್ತಿಗೆ ಅನ್ನವನ್ನು ಪೂರೈಸುತ್ತಿದ್ದ ನಮ್ಮ ತಾಯಿ ತಂದೆಗಳು ಮನೆಯಲ್ಲಿ ನಮ್ಮನ್ನು ನೆನೆಯುವರು", ಎಂದು ಬಹು ಕಾಕುಲತೆಯಿಂದ ನುಡಿಯುವದನ್ನು ಕೇಳಿ, ಸಿದ್ಧನು, "ಈ ಪವಿತ್ರವಾದ ಗುರುಮಾರ್ಗವನ್ನು ಹಿಡಿದವರು ಬಹು ದುಃಖವನ್ನು ಸಹಿಸಬೇಕುಗುವದು. ದೇಹಾಭಿಮಾನಿಗಳಿಗೆ ಇದು ದುರ್ಭರವಾದದ್ದು. ನಿಮಗಿಲ್ಲಿ ಅಧಿಕಾರವಿಲ್ಲ. ನೀವು ಈಗ ಮನೆಗೆಹೋಗಿ, ಸುಖದಿಂದ ಸಂಸಾರದೊಳಿದ್ದು, ಅಂತರದಲ್ಲಿ ಈಶ್ವರನನ್ನು ಪ್ರೇಮದಿಂದ ಭಜಿಸತಕ್ಕದ್ದು. ಆಮೇಲೆ ನೀವು ಅಧಿಕಾರಿಗಳಾಗುವಿರಿ", ಎಂದು ನುಡಿದನು. ಈ ಪ್ರಕಾರ ಸಿದ್ಧಮುನಿ ಕೃಪಾವಚನವನ್ನು ಕೇಳಿ, ಭೀಮ ಸೋಮರಿಬ್ಬರೂ, ಸಿದ್ಧನಿಗೆ ನಮಿಸಿ ತಮ್ಮ ಗ್ರಾಮಕ್ಕೆ ಹೊರಟರು. ಸಿದ್ಧನಾಥನು, "ನಿಮ್ಮ ವೃತ್ತಿಯ ಗುರುಸೇವೆಯಲ್ಲಿ ನಿರತವಾಗಿ, ನಿಮ್ಮ

ಇಷ್ಟಿತಾರ್ಥವು ಸಫಲವಾಗಲಿ" ಎಂದು ಆಶೀರ್ವದಿಸಿ, ಅಲ್ಲಿಂದ ಗುರುಗಳನ್ನು ಶೋಧಿಸುವದಕ್ಕೆ ಮುಂದಕ್ಕೆ ಹೊರಟನು.

ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸಕಲ ಪಾಪಗಳನ್ನು ಭಸ್ಮ ಮಾಡುವಂಥಈ ಮೂರನೇ ಅಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸಿರುವನು.